ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 102-105
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಐತಿಹಾಸಿಕ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು

**ಜಯಲಕ್ಷ್ಮಿ ಟಿ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***

*ಕನ್ನಡದಲ್ಲಿ ಹೊಸ ಹೊಸ ಸಾಹಿತ್ಯ ರೂಪಗಳು ವೈವಿಧ್ಯತೆಗಳಿಂದ ಸಮೃದ್ಧವಾಗಿ ಬೆಳೆದು ಬಂದಿದೆ. ಪ್ರಾಚೀನ ಕಾಲದಲ್ಲಿ ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ ಹೇಗೆ ಪ್ರಾಮುಖ್ಯವೋ ಹಾಗೇ ಆಧುನಿಕ ಕಾಲದಲ್ಲಿ ಕಾದಂಬರಿ, ಕಾವ್ಯ, ಕಥೆ, ನಾಟಕ, ಪ್ರಬಂಧ, ವಿಮರ್ಶೆ, ಆತ್ಮಚರಿತ್ರೆಗಳು ಮುಖ್ಯವಾಗಿವೆ. ಆಧುನಿಕ ಕನ್ನಡ ಸಾಹಿತ್ಯ ಪ್ರಮುಖವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಎಂಬ ಸಾಹಿತ್ಯ ಘಟ್ಟಗಳಾಗಿ ಅತ್ಯಂತ ಜನಪ್ರಿಯವಾಗಿವೆ. ಇಂಥ ಸಾಹಿತ್ಯ ರೂಪಗಳಲ್ಲಿ ಕಾದಂಬರಿಯು ಅತ್ಯಂತ ಪ್ರಮುಖವಾದುದು. ಕಾದಂಬರಿಯು ತನ್ನ ಆಳ ವಿಸ್ತಾರಗಳನ್ನು ಹೆಚ್ಚಿಸಿಕೊಳ್ಳುತ್ತಲೇ ಇಂದು ಕನ್ನಡ ಪ್ರಮುಖ ಸಾಹಿತ್ಯ ಪ್ರಕಾರವಾಗಿ ಬೆಳೆದುನಿಂತಿವೆ. ಕನ್ನಡ ಕಾದಂಬರಿಗಳು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಪತ್ತೇದಾರಿ ಎಂಬ ವಿವಿಧ ಪ್ರಬೇಧಗಳಲ್ಲಿ ರಚನೆಗೊಂಡಿವೆ. ಪ್ರಸ್ತುತ ಲೇಖನದಲ್ಲಿ ತ.ರಾ.ಸು ರವರ ಐತಿಹಾಸಿಕ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳ ಚಿತ್ರಣವನ್ನು ಕುರಿತು ವಿಶ್ಲೇಷಿಸಲಾಗಿದೆ.*

***Keywords:*** *ಆಧುನಿಕ ಕನ್ನಡ ಸಾಹಿತ್ಯ, ಕಾದಂಬರಿ, ಐತಿಹಾಸಿಕ ಕಾದಂಬರಿ, ಸ್ತ್ರೀಪಾತ್ರ, ತರಾಸು.*

**ಪೀಠಿಕೆ**

ಸಾಹಿತ್ಯ ಕ್ಷೇತ್ರದಲ್ಲಿ ಐತಿಹಾಸಿಕ ಕಾದಂಬರಿಗಳು ತಮ್ಮದೇ ಆದ ಸಮಕಾಲೀನ ಬದುಕಿನ ಒಳನೋಟಗಳನ್ನು ಇತಿಹಾಸದ ಅಂಶಗಳನ್ನು ತೆರೆದಿಟ್ಟಿವೆ. ಇತಿಹಾಸದ ಕಾದಂಬರಿ ಎಂದರೆ ಕೇವಲ ಇತಿಹಾಸದ ನಿರೂಪಣೆಯಲ್ಲಿ ಆ ಕಾಲದ ವಾತಾವರಣದ ಚಿತ್ರಣ, ಕನ್ನಡ ಕನ್ನಡದಲ್ಲಿ ಪ್ರಕಟವಾಗಿರುವ ಐತಿಹಾಸಿಕ ಕಾದಂಬರಿಗಳನ್ನು ಗಮನಿಸಿದರೆ ಸುಮಾರು 250ಕ್ಕೂ ಮೀರಿ ಕಾದಂಬರಿಗಳು ಬಂದಿದ್ದರೂ ಕೂಡ ಐತಿಹಾಸಿಕ ಮಹಿಳೆಯರನ್ನು ಕುರಿತಂತೆ ಕಾದಂಬರಿಗಳನ್ನು ರಚಿಸಿದ ಲೇಖಕಿಯರ ಸಂಖ್ಯೆ ಬೆರಳೆಣಿಕೆಯಲ್ಲಿ ಅಷ್ಟೇ ಕಂಡುಬರುತ್ತದೆ.

ಐತಿಹಾಸಿಕ ಹಿನ್ನೆಲೆಯಲ್ಲಿ ಪುರುಷರನ್ನು ಕುರಿತು ರಚನೆಯಾದ ಕಾದಂಬರಿಗಳ ಪ್ರಮಾಣ ಹೆಚ್ಚಾಗಿ ಕಂಡುಬಂದರೆ ಸ್ತ್ರೀಯರನ್ನು ಕುರಿತು ರಚನೆಯಾದದ್ದು ಬಹುವಿರಳವಾಗಿದೆ ಎನ್ನಬಹುದು. ಆದರೂ ನಮ್ಮ ನಾಡಿನ ಸಮಗ್ರ ಚರಿತ್ರೆಯಲ್ಲಿ ಮಹಿಳೆಯರನ್ನು ಅಲಕ್ಷಿಸುವಂತಿಲ್ಲ. ಸಾಹಿತ್ಯ, ಧರ್ಮ, ಸಂಸ್ಕೃತಿ, ಕಲೆ, ಆಡಳಿತ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರ ಕಾಣಿಕೆಯನ್ನು ಮರೆಯುವಂತಿಲ್ಲ. ಹೆಣ್ಣು ಸಾವಿರಾರು ವರ್ಷಗಳ ಪರಂಪರೆಯಲ್ಲಿ ಹಾದು ಬಂದಿದ್ದಾಳೆ. ಹಲವು ಸಾಮಾಜಿಕ ಯುಗದಲ್ಲಿ ಆಕೆಯ ಸಹಯೋಗವಿದೆ. ಇವಳು ಎದುರಿಸಿದ ಸವಾಲುಗಳು ಇಕ್ಕಟ್ಟು-ಬಿಕ್ಕಟ್ಟುಗಳು ಕಡಿಮೆಯಲ್ಲಿ ಇಂಥ ಪ್ರತಿಕೂಲ

***Please cite this article as:*** ಜಯಲಕ್ಷ್ಮಿ ಟಿ. (2023). ಕನ್ನಡ ಐತಿಹಾಸಿಕ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್.* 2(2), 102–105.

ಪರಿಸರದಲ್ಲಿಯೂ ಆಕೆಯ ಚೈತನ್ಯ ಬತ್ತದೆ ಚಿಗುರುತ್ತ ಪುಟಿಯುತ್ತ ಚರಿತ್ರೆಯುದ್ದಕ್ಕೂ ಪ್ರಕಟವಾಗಿದೆ. ಸ್ತ್ರೀ ಸಂಸ್ಕೃತಿಯ ಚರಿತ್ರೆ ಪರಂಪರೆಯ ಹೆಜ್ಜೆ ಗುರುತುಗಳನ್ನು ಗುರುತಿಸುವಲ್ಲಿ ಮಾರ್ಗದರ್ಶಕ ವಾಗಿವೆ. 'ಸ್ತ್ರೀ ಮಾಯೆ ಎಂದು ಕರೆದ ಆತ್ಮೋದ್ಧಾರಕ್ಕೆ ಅನರ್ಹಳು ಎನ್ನುವ ವ್ಯವಸ್ಥೆಯ ಆರೋಪಗಳನ್ನು ಮಹಿಳೆಯರು ಸುಳ್ಳಾಗಿಸಿದರು, ಧೈರ್ಯ, ಸಾಹಸ ಗುಣಗಳು ಗಂಡಿಗೆ ಮಾತ್ರ ಸೀಮಿತ ಎನ್ನುವ ಸಾಂಪ್ರದಾಯಿಕ ತಿಳುವಳಿಕೆಯನ್ನು ಹುಸಿಗೊಳಿಸಿದರು.

ಮಹಿಳೆಯರು ನಡೆದುಬಂದ ದಾರಿಯನ್ನು ತಿಳಿಸುವ ಮುಖ್ಯ ಆಕರಗಳೆಂದರೆ ಪ್ರಾಚೀನ ಕಾವ್ಯಗಳು ಮತ್ತು ಶಾಸನಗಳು ಇವುಗಳ ಆಧಾರದಿಂದ ಕಾದಂಬರಿಕಾರರು ತಮ್ಮ ಕಲ್ಪನೆಯನ್ನು ಬೆರೆಸಿ ಆದರ್ಶ ಮಹಿಳೆಯರ ಕುರಿತು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದಾರೆ. ತ.ರಾ.ಸು. ಅವರು ಬರೆದಿರುವ ಐತಿಹಾಸಿಕ ಕಾದಂಬರಿಗಳಲ್ಲಿ ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗು ಬಾಣ ಮತ್ತು ದುರ್ಗಾಸ್ತಮಾನ ಎಂಬ ಕೃತಿಗಳನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮೇಲೆ ಹೇಳಲಾದ ಕಾದಂಬರಿ ಗಳಲ್ಲಿ ಸಂಪೂರ್ಣವಾಗಿ ಚಿತ್ರದುರ್ಗದ ಪಾಳೆಯ ಗಾರರಿಗೆ ಸಂಬಂಧಿಸಿದ ವಸ್ತುವನ್ನು ಒಳಗೊಂಡಿವೆ.

**ಓಬವ್ವ ನಾಗತಿ**

ಓಬವ್ವ ನಾಗತಿ ದುರ್ಗಾಸ್ತಮಾನ ಕಾದಂಬರಿಯಲ್ಲಿ ಬರುವ ಪ್ರಮುಖ ಸ್ತ್ರೀ ಪಾತ್ರ. ಓಬವ್ವ ನಾಗತಿಯನ್ನು ದುರ್ಗದ ಬಗೆಗೆ ಅಭಿಮಾನವುಳ್ಳ ಮುತ್ಸದ್ದಿತನದ ಆದರ್ಶ ಸ್ತ್ರೀಯಂತೆ ತ.ರಾ.ಸು. ಚಿತ್ರಿಸಿದ್ದಾರೆ. ರಾಜ್ಯದ ಸಂದಿಗ್ಧಪರ ಅತಿಯಲ್ಲೂ ರಾಜಕಾರಣದ ಸೂತ್ರವನ್ನು ಕೈಯಲ್ಲಿ ಹಿಡಿದು ಆಡಳಿತ ನಡೆಸುವ ಚತುರೆಯನ್ನು ಇವಳಲ್ಲಿ ಕಾಣುತ್ತೇವೆ. ಆ ಮೂಲಕ ತನ್ನ ಸ್ವಂತಿಕೆಯನ್ನು ಮರೆಯುತ್ತಾಳೆ. 'ಹೆಣ್ಣಾಗಿ ಹುಟ್ಟೋದು ಕಷ್ಟಪಡಲಿಕ್ಕೇ ಕಣ್ಣೀರಿಡಲಿಕ್ಕೆ ವಿಧಿ ಹೆಣ್ಣಿನ ಹಣೇಲಿ ಅದೊಂದನ್ನೇ ಬರೆದಿರೋದು' ಎಂದು ಹೇಳುವ ಓಬವ್ವ ನಾಗತಿಯ ಮಾತಿನಲ್ಲಿ ಸ್ತ್ರೀ ಧರ್ಮವನ್ನು ಕಾಣಬಹುದಾಗಿದೆ. ಇದು ಸ್ತ್ರೀಯರಿಗೂ ಅನ್ವಯಿಸುವ ಮಾತಿನಂತೆ ತೋರುತ್ತದೆ. ವಯಸ್ಸಾಗಿದ್ದರೂ ರಾಜ್ಯದ ಮೇಲೆ ತಾನಿಟ್ಟ ಅಭಿಮಾನದಿಂದ ಹೋರಾಡುವ ದಿಟ್ಟತನವನ್ನು ಮರೆಯುವ ಇವಳು ಮದಕರಿ ನಾಯಕನನ್ನು ಪಟ್ಟಕ್ಕೆ ತರುವಲ್ಲಿ ಪ್ರಮುಖ ಪಾತ್ರವಹಿಸುತ್ತಾಳೆ. ಇದೇ ಸಂದರ್ಭದಲ್ಲಿ ರಾಯದುರ್ಗದವರು "ಪಟ್ಟದಲ್ಲಿ ಚೋಟುದ್ದ ಹುಡುಗ ಆಡಳಿತ ಮಾಡೋಳು ಮುದುಕಿ" ಎಂದು ಹೀಯಾಳಿಸಿ ಯುದ್ಧವನ್ನು ಸಾರಿದಾಗ ಓಬವ್ವ ನಾಗತಿ ಯುದ್ಧಕ್ಕೆ ಸಿದ್ಧಳಾಗುವ ಪ್ರಸಂಗದಲ್ಲಿ ಓಬವ್ವ ನಾಗತಿಯು ಮದಕರಿ ನಾಯಕರ ಮಡದಿಗೆ "ಹಸುಗಳನ್ನು ಕಟ್ಟುವುದೂ ಒಂದೇ ಹೆಣ್ಣುಮಕ್ಕಳ ಸೆರಗಿಗೆ ಕೈ ಹಾಕುವುದೂ ಒಂದೇ" ಎಂದು ರಾಜಾರೋಷವಾಗಿ ನುಡಿದು ಯುದ್ಧಕ್ಕೆ ಸಿದ್ಧಳಾಗುತ್ತಾಳೆ. ಇಂತಹ ಚಿತ್ರಣದೊಂದಿಗೆ ಮಹಿಳೆಯರ ದಿಟ್ಟತನದ ಮೇಲೆ ತ.ರಾ.ಸು. ಬೆಳಕು ಚೆಲ್ಲುತ್ತಾರೆ. ಓಬವ್ವ ನಾಗತಿಯ ಈ ಪಾತ್ರ ಈ ಕಾದಂಬರಿ ವಿನೋದಾತ್ತ ಪಾತ್ರವಾಗಿ ಚಿತ್ರಿಸಲ್ಪಟ್ಟಿದೆ.

**ಗಿರಿಜೆ**

ತ.ರಾ.ಸು. ಅವರು ಗಿರಿಜೆಯ ಪಾತ್ರವನ್ನು ಅತೀ ಕಾಳಜಿವಹಿಸಿ ತಮ್ಮ ನಾಲ್ಕು ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಗಿರಿಜೆ ಕಲ್ಪಿತ ಪಾತ್ರವಾಗಿ ಸೃಷ್ಟಿಗೊಂಡಿ ದ್ದಾಳೆ. ನಿಷ್ಠಾವಂತ ವ್ಯಕ್ತಿಯಂತೆ ಕಂಡುಬರುವ ಸಾಮಾನ್ಯ ಮಹಿಳೆ ಗಿರಿಜೆ ಅಂತಪುರದ ದಾಸಿಯಾಗಿ ಸಾಮಾನ್ಯಳಾದರೂ ಎಲ್ಲ ರಾಣಿಯರ ಪ್ರೀತಿ ಪಾತ್ರಕ್ಕೆ ಒಳಗಾದವಳು. ರಾಜ್ಯ ನಿಷ್ಠೆಯನ್ನು ಮರೆಯುವ ಇವಳು ಮಹಾ ಸ್ವಾಭಿಮಾನಿಯಂತೆ ಹಲವು ಕಾದಂಬರಿಗಳಲ್ಲಿ ಚಿತ್ರಿಸಲ್ಪಟ್ಟಿದ್ದಾಳೆ. ರಾಜ್ಯದ್ರೋಹಿಗಳ ವಿರುದ್ಧ ಇವಳು ಕೋಪ ಕಾರುತ್ತಾಳೆ. ನಿಷ್ಠೆ, ಪ್ರಾಮಾಣಿಕತೆಗಳು ಇವಳ ಬದುಕಿನ ಉಸಿರಾಗಿ ಕಾಣುತ್ತವೆ. ಹಿರಿಯ ನಾಗತಿಯ ಮಾತಿನಂತೆ ಓಬಣ್ಣನಾಯಕನ ಪ್ರಾಣ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುತ್ತಾಳೆ. ಅರಮನೆಯಲ್ಲಿನ ಯಾವ ವಿಚಾರವನ್ನು ಯಾರೊಂದಿಗೂ ಚರ್ಚಿಸದ ಇವಳು

ತನ್ನ ನಿಜಧರ್ಮದೊಂದಿಗೆ ಬದುಕಿದವಳು. ಓಬಣ್ಣ ನಾಯಕನ ಕೊಲೆ ಆದಾಗ ನೊಂದುಕೊಂಡು ಹುಚ್ಚಿಯಂತೆ ತಿರುಗುತ್ತಾಳೆ. ಅವಳ ರುದ್ರರಮಣೀಯ ವ್ಯಕ್ತಿತ್ವ ಗೋಚರಿಸುತ್ತದೆ. ಗಿರಿಜೆಯ ಪಾತ್ರದೊಂದಿಗೆ ಶ್ರೀಸಾಮಾನ್ಯ ಮಹಿಳೆಯೊಬ್ಬಳಲ್ಲಿನ ರಾಷ್ಟ್ರಾಭಿಮಾನ ತನ್ನ ಕೆಚ್ಚದೆಯ ಹೋರಾಟದಿಂದಾಗಿ ಅವಳು ಗೆರಿಲ್ಲಾ ಸ್ತ್ರೀಯಂತೆ ಕಂಡುಬರುತ್ತಾಳೆ. ಕಂಬನಿಯ ಕುಯಿಲಿನಲ್ಲಿ ಸೌಮ್ಯ ಸುಂದರಳಾಗಿ ಕಂಡು ಗಿರಿಜೆ ಮುಂದಿನ ರಾಜ್ಯದಾಹ, ರಕ್ತರಾತ್ರಿ, ತಿರುಗುಬಾಣ ಕಾದಂಬರಿಗಳಲ್ಲಿ ಕ್ರಮೇಣ ಉಗ್ರರೂಪವಾಗಿ ಕಾಣಸಿಗುತ್ತಾಳೆ. ಗಿರಿಜೆಯ ವ್ಯಕ್ತಿತ್ವದಲ್ಲಿ ನಮಗೆ ಕಂಡುಬರುವ ಕ್ರೂರ ಕೋಪದ ಭಾವನೆಗಳು ಸುಮಾರು ಹನ್ನೆರಡು ವರ್ಷಗಳಿಂದಲೂ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಕಾದಿರುವ ಹೆಣ್ಣು ಗಿರಿಜೆಯ ಪಾತ್ರ ಭಯಂಕರವಾಗಿ ಕಂಡರೂ ಅದ್ಭುತ ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ ಎಂಬ ಮಾತನ್ನು ಯಥಾವತ್ತಾಗಿ ಪ್ರತಿನಿಧಿಸುತ್ತದೆ. ಈ ಪಾತ್ರ ಒಟ್ಟಿನಲ್ಲಿ ಗಿರಿಜೆ ನಾಲ್ಕು ಕಾದಂಬರಿಗಳ ಒಂದು ಕೊಂಡಿಯಂತೆ ಕೇಂದ್ರ ವ್ಯಕ್ತಿಯಾಗಿದ್ದಾಳೆ. ಅವಳು ನಿಷ್ಠಾವಂತ ಸೇವಕಿಯಾಗಿ ಒಲಿಮೆಯ ಸ್ತ್ರೀಯಾಗಿ ದೀರ್ಘ ಪ್ರಯತ್ನವಾದಿಯಾಗಿ ತನ್ನ ಸಾಹಸ ಧೈರ್ಯಗಳನ್ನು ವಹಿಸಿಕೊಂಡು ಗುರಿ ತಲುಪುವಲ್ಲಿ ಯಶಸ್ವಿ ಯಾಗುತ್ತಾಳೆ. ಹೆಣ್ಣು ಮನಸ್ಸು ಮಾಡಿದರೆ ಎಂಥವರನ್ನು ಪಾತಾಳಕ್ಕಟ್ಟಬಹುದು ಎಂಬುದನ್ನು ಗಿರಿಜೆ ತೋರಿಸಿ ಕೊಟ್ಟಿದ್ದಾಳೆ. ಕಾದಂಬರಿಯಲ್ಲಿ ಗಿರಿಜೆಯ ಪಾತ್ರ ಕೆಲವು ಅಸಹಜ ಸನ್ನಿವೇಶ ಘಟನೆಗಳನ್ನೊಳಗೊಂಡಿದ್ದರೂ ಬಹುಕಾಲ ಉಳಿಯುವ ಪಾತ್ರವಾಗಿದೆ.

**ಮಲ್ಲವ್ವ ನಾಗತಿ**

ರಕ್ತರಾತ್ರಿ ಕಾದಂಬರಿಯಲ್ಲಿ ಮೂಡಿಬರುವ ಮಲ್ಲವ್ವ ನಾಗತಿ ಪಾತ್ರ ಪ್ರಮುಖವಾದದ್ದು. ಇವಳು ಚಿಕ್ಕಣ್ಣನಾಯಕನ ಮಡದಿ. ಉಗ್ರ ಚನ್ನವೀರ ಸ್ವಾಮಿಗಳ ಪರಮ ಭಕ್ತೆ. ಚಿಕ್ಕಣ್ಣನಾಯಕನು ಶಿವದೀಕ್ಷೆ ಪಡೆದಾಗ ಈಕೆಯು ದೀಕ್ಷೆ ಪಡೆದು ಶಿವಭಕ್ತಳಾಗುತ್ತಾಳೆ. ಚಿಕ್ಕಣ್ಣನಾಯಕರ ಮರಣ ನಂತರ ಅವರ ಮುಖ್ಯ ರಾಣಿಯರಲ್ಲಿ ಸಹಗಮನ ಮಾಡಿದರೂ ಮಲ್ಲವ್ವ ನಾಗತಿ ಹಾಗೆ ಉಳಿದುಕೊಂಡಿದ್ದಳು. ನಾಗತಿ ಬದುಕಿನಿಂದ ವಂಚಿತಳು, ದುರ್ಬಲ ಮನಸ್ಸಿನವಳು ಯಾವುದನ್ನು ಧೈರ್ಯವಾಗಿ ಎದುರಿಸುವ ಶಕ್ತಿಯಿಲ್ಲದ ಇವಳು ಆತ್ಮಹತ್ಯೆ ಮಾಡಿಕೊಳ್ಳುವ ಪಾತ್ರವಾಗಿ ಚಿತ್ರಿಸಿಕೊಂಡಿದ್ದಾಳೆ. ಮಲ್ಲವ್ವ ನಾಗತಿ ರಾಜಕಾರಣ ದಲ್ಲೂ ಮುಂದೆ ಬಾರದೆ ಧಾರ್ಮಿಕವಾಗಿ ಹೆಚ್ಚಿನದನ್ನು ಸಾಧಿಸದೇ ಬದುಕೇ ಭಾರವಾಗಿ ಯಾತನೆಯನ್ನು ಅನುಭವಿಸುತ್ತಾಳೆ. ನಯ, ವಿನಯ, ಭಕ್ತಿ ಭಾವನೆಗಳನ್ನು ಹೊಂದಿರುವ ನಾಗತಿಯ ಪಾತ್ರ ಮೊದಮೊದಲು ಸಪ್ಪೆಯಾಗಿ ಮುಂದೆ ಸ್ವಾರ್ಥದ ಲೇಪನ ಹೊಂದಿ ಜೀವನದಲ್ಲಿರುವ ಜಿಗುಪ್ಸೆಯಿಂದಾಗಿ ಸಾವನ್ನು ಕಾಣುತ್ತಾಳೆ. ಇವರ ಮುಗ್ಧತೆ ಹಾಗೂ ಪ್ರಾಣಾರ್ಪಣೆ ಈ ಎರಡರಿಂದ ಮನಸ್ಸಿನಲ್ಲಿ ಕೆಲವು ಕಾಲ ಉಳಿಯುವ ಪಾತ್ರವಾಗಿದೆ.

**ನಿಂಗವ್ವ ನಾಗತಿ**

ಜಾನಕಲ್ಲು ಭರಮಣ್ಣ ನಾಯಕರ ಪತ್ನಿ ವೀರಮದಕರಿನಾಯಕನ ತಾಯಿ ಓಬವ್ವ ನಾಗತಿ ತೀರಿಕೊಂಡ ಬಳಿಕ ಅರಮನೆಯ ಜವಾಬ್ದಾರಿ ಇವರಿಗೆ ಬಂದಿತು. ದಾಸಿಯರು ಊಳಿಗದವರನ್ನು ನಿಬಾಯಿಸಿಕೊಂಡು ಇಬ್ಬರು ಗಂಡು ಮಕ್ಕಳನ್ನು ನೋಡಿಕೊಂಡು ಸೊಸೆಯನ್ನು ತಿದ್ದಿ ತೀಡಿ ಅವರನ್ನು ಪ್ರೀತಿಯಿಂದ ಕಂಡ ಮಮತಾಮಯಿ. ದುರ್ಗಕ್ಕೆ ಒಳ್ಳೆಯದನ್ನು ಬಯಸಿದವರು ಇವರಿಗೆ ಹೂಮಾಲೆ ಕಟ್ಟುವುದೆಂದರೆ ಇಷ್ಟವಂತೆ. ಅರಮನೆಯ ತೋಟ ದಲ್ಲಿ ಬೆಳೆದಿದ್ದ ಹೂಗಳನ್ನು ಬಿಡಿಸಿ ಮಾಲೆ ಕಟ್ಟಿ ತನ್ನಿಬ್ಬರು ಗಂಡು ಮಕ್ಕಳ ಹೆಸರಿನಲ್ಲಿ ಮದಕರಿ ನಾಯಕ, ಪರಶುರಾಮ ನಾಯಕ ಪುತ್ರ ಹಾರ ಸೇವೆ ಸಲ್ಲಿಸುತ್ತಿದ್ದರಂತೆ. ದೇವರಿಗೆ ರಾಜನ ತಾಯಿ ಎಂದು ಒಂದು ದಿನವೂ ದರ್ಪ ಮಾಡದೆ ಸರಳವಾಗಿ ಬದುಕಿದ ಇವರ ಮನಸ್ಸು ಹೂವಿನಂತಿದ್ದರೂ ಕೊನೆಗಾಲದಲ್ಲಿ ತನ್ನಿಬ್ಬರೂ ಪುತ್ರರನ್ನು ಸೊಸೆಯರನ್ನು ಕಳೆದುಕೊಂಡು ಹತಾಶರಾಗಿ ಕೊನೆಯುಸಿರೆಳೆದಂತೆ

ಈ ರೀತಿಯಾಗಿ ಐತಿಹಾಸಿಕ ಕಾದಂಬರಿಗಳಲ್ಲಿ ಸ್ತ್ರೀ ತುಂಬ ಮುಖ್ಯಳೆನಿಸುತ್ತಾಳೆ.

ಐತಿಹಾಸಿಕ ಕಾದಂಬರಿಗಳಲ್ಲಿ ಪುರುಷ ಪಾತ್ರಗಳೇ ಪ್ರಧಾನ ಅವುಗಳ ಆರ್ಭಟ ಹೋರಾಟಗಳ ನಡುವೆ ಕಣ್ಣಿಗೆ ಕಾಣುವಂತೆ ನಿಲ್ಲುವ ಹೆಣ್ಣು ಅದ್ಭುತ ವ್ಯಕ್ತಿಯೆಂದೆ ತಿಳಿಯಬೇಕು. ಸಹ್ಯಾದ್ರಿ ಶ್ರೇಣಿಯ ದಿಗಂತಪರ್ಯಂತ ಹಬ್ಬಿ ಮುಗಿಲೆತ್ತರ ಬೆಳೆದು ಮದಸಿ ನಿಂತ ಹೆಮ್ಮರಗಳ ನಡುವೆ ಅವುಗಳನ್ನೇ ಆಶ್ರಯಿಸಿ ಬಳಸಿ ಬೆಳೆದು ಉಕ್ಕಿನ ತಂತಿಗಳಂತೆ ತೋರುವ ಬಳ್ಳಿಗಳಿಗೆ ಸಮಾನವಾಗಿದೆ. ಇಲ್ಲಿಯ ಸ್ತ್ರೀ ಪಾತ್ರಗಳ ಜೀವನ ಹೆಮ್ಮರಗಳು ಉರುಳುತ್ತಿದ್ದಂತೆಯೇ ಬಳ್ಳಿಗಳೂ ನೆಲಸಮವಾಗಿ ಬಿಡುತ್ತವೆ. ಈ ರೀತಿಯಾಗಿ ಐತಿಹಾಸಿಕ ಕಾದಂಬರಿಗಳಲ್ಲಿ ಸ್ತ್ರೀ ತುಂಬಾ ಮುಖ್ಯಳೆನಿಸುತ್ತಾಳೆ. ಸ್ತ್ರೀಯಾದವಳು ಕೇವಲ ನಾಲ್ಕು ಗೋಡೆಗಳ ಮಧ್ಯೆ ಬಂಧಿಯಲ್ಲಿ ಹೆಣ್ಣು ಆಡಳಿತವನ್ನು ಮಾಡಬಲ್ಲಳು. ಪುರುಷನಿಗೆ ಸರಿಸಮನಾಗಿ ನಿಲ್ಲಬಲ್ಲಳು ಹಾಗೂ ಉತ್ತರಾಧಿಕಾರತ್ವದ ಪ್ರಶ್ನೆ ತಿಳಿಯುವ ದಿವ್ಯ ನಿಲುವು ರಾಜಕೀಯವಾಗಿಯಷ್ಟೇ ಅಲ್ಲದೆ ಸಾಮಾಜಿಕವಾಗಿ, ಧಾರ್ಮಿಕವಾಗಿ ಮುಖ್ಯವೆನಿಸುತ್ತವೆ. ಸೈನ್ಯವನ್ನು ನಿಯಂತ್ರಿಸುವಂತಹ ಸಂದರ್ಭ ಕೂಡ ಬಂದಾಗ ಸ್ವಂತ ವಿವೇಚನೆಯಿಂದ ಸರಿದಾರಿಯಲ್ಲಿ ನಡೆಯುತ್ತಾಳೆ ಎಂಬುದನ್ನು ಓಬವ್ವ ನಾಗತಿ, ಗಿರಿಜೆ, ಮಲ್ಲವ್ವ ನಾಗತಿ, ನಿಂಗವ್ವ ನಾಗತಿ ಮುಂತಾದವರಿಂದ ಕಂಡುಕೊಳ್ಳಬಹುದಾಗಿದೆ.

ಒಟ್ಟಾರೆಯಾಗಿ ಈ ಎಲ್ಲಾ ಐತಿಹಾಸಿಕ ಕಾದಂಬರಿಗಳಲ್ಲಿ ಮೂಡಿಬಂದ ಸ್ತ್ರೀ ಪಾತ್ರಗಳು ತಮ್ಮದೇ ಆದ ಗುಣ ಮೌಲ್ಯಗಳಿಗೆ ಪ್ರಸಿದ್ಧಿಯನ್ನು ಪಡೆದಿದ್ದಾಳೆ. ಇತಿಹಾಸದಲ್ಲಿ ಮೂಡಿಬಂದಂತಹ ಮಹಿಳಾ ಪಾತ್ರಗಳ ಜೀವನವನ್ನು ಐತಿಹಾಸಿಕ ಘಟನೆಗಳನ್ನು ಕೆಲವೊಂದು ಕಲ್ಪನೆ ರಂಜಕತೆ ಗಳೊಂದಿಗೆ ರೋಚಕವಾಗಿ ನಿರೂಪಿಸಿದರೆ ಅದು ಓದುಗರ ಮನಸ್ಸನ್ನು ಪರಿಣಾಮಕಾರಿಯಾಗಿ ತಟ್ಟಬಲ್ಲದೆಂಬ ನಿರೀಕ್ಷೆ ಇದ್ದಂತಿದೆ. ಹಾಗಾಗಿ ಇಂತಹ ಕೆಲಸ ಐತಿಹಾಸಿಕ ಕಾದಂಬರಿಗಳಿಂದ ಸಾಧ್ಯವಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಇಂಥ ವಿವಿಧ ಬಗೆಯ ಆಶಯಗಳು ಐತಿಹಾಸಿಕ ಕಾದಂಬರಿಗಳಲ್ಲಿ ಪುನರ್‌ಸೃಷ್ಟಿಗೊಂಡು ನಾನಾ ಸ್ವರೂಪದ ಮಹಿಳಾ ಪಾತ್ರಗಳ ಮೂಲಕ ಬಿಂಬಿತವಾಗಿರುವುದು ಗಮನಾರ್ಹ ಸಂಗತಿಯಾಗಿವೆ.

**ಪರಾಮರ್ಶನ ಗ್ರಂಥಗಳು**


- ಮಹೇಶ ಎಂ. (2009). *ತ.ರಾ.ಸು ಸಾಹಿತ್ಯ: ಒಂದು ಅಧ್ಯಯನ.* ಹೇಮಂತ ಪ್ರಕಾಶನ
- ಪಾಟೀಲ. ಎಂ.ಎಸ್. (1993). *ತ.ರಾ.ಸು. ಹಾಗೂ ಅವರ ಕಾದಂಬರಿಗಳು.* ಕನ್ನಡ ಸಾಹಿತ್ಯ ಪರಿಷತ್ತು.
- ತ.ರಾ.ಸು. (1998). *ದುರ್ಗಾಸ್ತಮಾನ.* ಕಾವ್ಯಾಲಯ ಪ್ರಕಾಶನ.
- ತ.ರಾ.ಸು. (1953). *ಕಂಬನಿಯ ಕುಯಿಲು.* ವೆಂಕಟರಾಮಯ್ಯ ಪ್ರಕಾಶನ.
- ತ.ರಾ.ಸು. (1964). *ತಿರುಗುಬಾಣ.* ವಿದ್ಯಾನಿಧಿ ಪ್ರಕಾಶನ.
- ತ.ರಾ.ಸು. (1966). *ರಾಜ್ಯದಾಹ.* ವಿದ್ಯಾನಿಧಿ ಪ್ರಕಾಶನ.